# ಪ್ರಾಣಿಪ್ರೇಮದ ನಾಯಿ ಮನೆ



**ಕಾರ್ಕಳಕ್ಕೆ ಸಮೀಪದ 'ನಾಯಿ ಮನೆ' ಅನಾಥ ನಾಯಿಗಳ ಸಂರಕ್ಷಣಾ ಕೇಂದ್ರ. ಮುರಿದ ಅಥವಾ ದುರ್ಬಲ ಕಾಲುಗಳ ನಾಯಿಗಳಿಂದ ಹಿಡಿದು ಕ್ಯಾನ್ಸರ್‌ಪೀಡಿತ ನಾಯಿಗಳು ಸೇರಿದಂತೆ ನೂರಾರು ನಾಯಿಗಳು ಇಲ್ಲಿವೆ.**

**■ ಪ. ರಾಮಕೃಷ್ಣ ಶಾಸ್ತ್ರಿ**

ಕಾರ್ಕಳ ತಾಲ್ಲೂಕು ಕೇಂದ್ರದಿಂದ ಬೆಳ್ತಂಗಡಿಗೆ ಬರುವ ದಾರಿಯಲ್ಲಿ ಏಳೆಂಟು ಕಿ.ಮೀ. ಸಾಗಿದಾಗ ಸಿಗುತ್ತದೆ ಬಜಗೋಳಿ ಪೇಟೆ. ಅಲ್ಲಿಂದ ಹೊರನಾಡು–ಶೃಂಗೇರಿಗೆ ಹೋಗುವ ರಸ್ತೆಯಲ್ಲಿ ಒಂದಿಷ್ಟು ದೂರ ಕ್ರಮಿಸಿದರೆ ಸಿಗುತ್ತದೆ ಮುಡಾರುವಿನ ಸುಮ್ಮ ಬಂಡಸಾಲೆ ಮನೆ. ಅಲ್ಲಿದೆ 'ಅಹಿಂಸಾ ಅನಿಮಲ್ ಕೇರ್ ಟ್ರಸ್ಟ್' ನಡೆಸುವ ಶ್ವಾನ ರಕ್ಷಣೆಯ ತಾಣ. ಒಂದೆಕರೆ ವಿಶಾಲ ಸ್ಥಳದಲ್ಲಿ ಸುತ್ತಲೂ ಕೆಂಪುಕಲ್ಲಿನ ಗೋಡೆ ಕಟ್ಟಿ, ಅನಾಥ ನಾಯಿಗಳನ್ನು ಸಂರಕ್ಷಿಸುವ ಕೆಲಸವನ್ನು ವ್ಯವಸ್ಥಿತವಾಗಿ ಇಲ್ಲಿ ಕೈಗೊಳ್ಳಲಾಗಿದೆ.

ಗೋಡೆಯ ಹೊರಗೆ ಗಟ್ಟಿಯಾದ ಬಾಗಿಲಿದೆ. ಆವರಣದೊಳಗೆ ಪುಟ್ಟ ಪುಟ್ಟ ಕಟ್ಟಡಗಳು, ಸಾಲು ಸಾಲು ಕಬ್ಬಿಣದ ಸರಳಿನ ಗೂಡುಗಳು. ಎಲ್ಲಿ ಕಣ್ಣು ಹಾಯಿಸಿದರೂ ಬೌವ್ ಬೌವ್ ಎಂದು ಬೊಗಳುತ್ತಿರುವ ನಾಯಿಗಳು – ಅದರಲ್ಲೂ ಹೆಚ್ಚಿನವು ಹೆಣ್ಣುನಾಯಿಗಳು. ಒಂದೊಂದು ನಾಯಿಯದೂ ಒಂದೊಂದು ಕಥೆ. ನಾಯಿಗಳ ಶುಶ್ರೂಷೆಯನ್ನು ನೋಡಿಕೊಳ್ಳುತ್ತಿರುವ ನಾಲ್ವರು ಕೆಲಸಗಾರರ ಪೈಕಿ ಯುವತಿಯೊಬ್ಬರು ಆ ಕಥೆ ಏನೆಂಬುದನ್ನು ಹೇಳುತ್ತಾರೆ.

'ನೋಡಿ, ಈ ನಾಯಿ ಉಂಟಲ್ಲ, ಅದರ ಒಂದು ಹಿಂಗಾಲನ್ನು ಬುಡದಲ್ಲೇ ಮೊಂಡಾಗಿದೆ. ಕಾಲಿನ ಮೇಲೆ ಲಾರಿ ಹರಿದಿತ್ತಂತೆ. ಇಲ್ಲಿಗೆ ತಂದು ಆರೈಕೆ ಮಾಡಿದ ಮೇಲೆ ಮೂರು ಕಾಲಿನಲ್ಲೇ ಹೇಗೆ ನಡೀತಿದ್ದಾನೆ ನೋಡಿ' ಎಂದು ಆ ನಾಯಿಯನ್ನು ಎದೆಗವಚಿಕೊಂಡು ಬಂದು ತೋರಿಸುತ್ತಾರೆ. ಹುಟ್ಟುವಾಗಲೇ ಕಾಲುಗಳಲ್ಲಿ ಬಲವಿಲ್ಲದ ನಾಯಿಯೊಂದರ ಕಡೆಗೆ ಗಮನ ಸೆಳೆಯುತ್ತಾರೆ. ದೇಹ ಗಟ್ಟಿಮುಟ್ಟಾಗಿದ್ದರೂ ಕಾಲು ಬಲಹೀನವಾಗಿರುವ ಕಾರಣ ಅದು ಕಷ್ಟಪಟ್ಟು ತೆವಳುತ್ತ ಬರುವ ದೃಶ್ಯ ಕಂಡಾಗ ಮನ ಕಲಕುತ್ತದೆ.

ಕೆಲವು ನಾಯಿಗಳಿಗೆ ಮೈಯಲ್ಲಿ ಗಡ್ಡೆಗಳಿವೆ. ಅವು ಕ್ಯಾನ್ಸರ್ ಗಡ್ಡೆಗಳು ಎಂದಿದ್ದಾರೆ ಪಶುವೈದ್ಯರು. ಇಂತಹ ನಾಯಿಗಳನ್ನು ಪ್ರತ್ಯೇಕವಾಗಿಟ್ಟು ಚಿಕಿತ್ಸೆ ನೀಡಲಾಗುತ್ತಿದೆ. ಕೆಲವಕ್ಕೆ ಮೈಯ ಕೂದಲೆಲ್ಲ ಉದುರುವ ಚರ್ಮರೋಗ. ಲಿವರ್ ಸಮಸ್ಯೆ, ಡಿಸ್ಟೆಂಪರ್ ಕಾಯಿಲೆಯಿರುವ ನಾಯಿಗಳಿವೆ. ಆದರೆ ಯಾವುದರ ಬಗೆಗೂ ಅನಾದರವಿಲ್ಲ. ಎಲ್ಲವನ್ನೂ ಸಮಾನ ಪ್ರೀತಿಯಿಂದ ನೋಡಿಕೊಳ್ಳುವ ಹೆಂಗರುಳಿನ ಕೆಲಸಗಾರರಿದ್ದಾರೆ.

ಕಾಯಿಲೆಯಿರುವ ನಾಯಿಗಳಿಗೆ ಒಂದು ವಿಭಾಗವಾದರೆ, ಆರೋಗ್ಯವಾಗಿರುವ ನಾಯಿಗಳಿಗೆ ಸ್ವಚ್ಛವಾದ ಗೂಡುಗಳು, ಮಲಗಲು ಮರದ ಮಂಚಗಳು. ದಿನದಲ್ಲಿ ಎರಡು ಸಲ ಹೊಟ್ಟೆತುಂಬ ಅನ್ನ ಮತ್ತು ಮೊಸರಿನ ಪುಷ್ಕಳ ಭೋಜನ. ಆರೋಗ್ಯ ವಿಚಾರಿಸಲು ಆಗಾಗ ವೈದ್ಯರು ಬರುತ್ತಾರೆ. ನಾಯಿಗಳ ಗೂಡು ತೊಳೆದ ನೀರು ಗೂಡಿನ ತಳದಲ್ಲಿರುವ ಕೊಳವೆ ಮೂಲಕ ದೂರದ ಕೊಳಚೆಗುಂಡಿ ಸೇರುವಂತೆ ಮಾಡಿದ್ದಾರೆ.

ನಾಯಿಗಳ ಸಂರಕ್ಷಣೆಯ ಮನೆಯನ್ನು ಕಟ್ಟಿದವರು ವೀರಂಜಯ ಹೆಗ್ಡೆ. ಊರವರಿಗೆ 'ವೀರು' ಎಂದೇ ಪರಿಚಿತರು. ಪಿಯುಸಿ ಓದಿದ್ದಾರೆ. ಬ್ಯಾಡ್ಮಿಂಟನ್ ಮತ್ತು ಷಟಲ್ ಆಟಗಾರ. ಬಾಲ್ಯದಿಂದಲೂ ಸಾಕುಪ್ರಾಣಿಗಳ ಬಗ್ಗೆ ಆಸಕ್ತಿ, ಪ್ರೀತಿ. ಶಾಲೆಗೆ ಹೋಗುವಾಗ ಬೀದಿಯಲ್ಲಿ ಕುಂಯ್‌ಗುಡುತ್ತಾ ಅಲೆದಾಡುತ್ತಿರುವ ಪುಟ್ಟ ಪುಟ್ಟ ನಾಯಿಮರಿಗಳನ್ನು ನೋಡುತ್ತಿದ್ದರು. ಮರಿ ಹೆಣ್ಣಾದರೆ ಯಾರಿಗೂ ಬೇಡ. ಅನ್ನಾಹಾರವಿಲ್ಲದೆ, ತಾಯಿಯ ಎದೆಹಾಲು ಸಿಗದೆ ಅನಾಥವಾದ ಮರಿಗಳು ಹಸಿವು, ದಾಹಗಳಿಂದ ಬಳಲಿ ಕೃಶವಾಗಿ, ವಾಹನಗಳ ಕೆಳಗೆ ಸಿಲುಕಿ ಸಾವನ್ನಪ್ಪುತ್ತಿರುವ ದೃಶ್ಯ ಕಂಡು ಅವರ ಮನ ಕರಗುತ್ತಿತ್ತು. ಸರಿಯಾಗಿ ಕಣ್ಣು ಬಿಡದ ಮರಿಗಳನ್ನು ಬೀದಿಪಾಲು ಮಾಡುವವರ ನಿಷ್ಕರುಣೆಯ ಕಂಡು ಬೇಸರವಾಗುತ್ತಿತ್ತು. ಅಂತಹ ನಾಯಿಗಳಿಗೆ ಅಂತಃಕರಣದಿಂದ ಮೋರಿಯ ಕೆಳಗೆ ಎಲ್ಲಾದರೂ ಸುರಕ್ಷಿತ ಜಾಗವಿದ್ದರೆ ಅಲ್ಲಿ ಮಲಗಲು ವ್ಯವಸ್ಥೆ ಮಾಡಿಕೊಡುತ್ತಿದ್ದರು.

ವಿದ್ಯಾರ್ಥಿ ದಿಸೆಯಲ್ಲಿರುವಾಗಲೇ ವೀರಂಜಯ ಹೆಗ್ಡೆ ಮನದಲ್ಲಿ ಮೂಡಿದ ಆಕಾಂಕ್ಷೆ ಪರಿತ್ಯಕ್ತ ನಾಯಿಗಳಿಗೆ ನೆಮ್ಮದಿಯ ಮನೆ ಕಟ್ಟುವುದು. ಬೀದಿಗಳಲ್ಲಿ ಅಲೆಯುತ್ತಿದ್ದ ಅನಾಥ ಮರಿಗಳನ್ನು ಮನೆಗೆ ತಂದಾಗ ಅವರ ಅಪ್ಪ–ಅಮ್ಮ, 'ಇದನ್ಯಾಕೆ ತಂದದ್ದು?' ಎಂದು ಬೇಸರಿಸಲಿಲ್ಲ. ಮಗನ ಹೃದಯವಂತಿಕೆಗೆ ಬೆನ್ನು ತಟ್ಟಿದರು. ನೆಂಟರಿಷ್ಟರ ಪ್ರೋತ್ಸಾಹ, ಸ್ನೇಹಿತರ ಬೆಂಬಲ ಹೀಗೊಂದು ಕಾಯಕವನ್ನು ಮುಂದುವರೆಸಲು ಪ್ರೇರೇಪಿಸಿತು. ಹನ್ನೆರಡು ವರ್ಷಗಳಿಂದ ಈ ಕೆಲಸವನ್ನು ಶ್ರದ್ಧೆಯಿಂದ ಮಾಡಿಕೊಂಡು ಬಂದಿದ್ದಾರೆ.

ದಿನಗಳೆದಂತೆ ನಾಯಿಗಳ ಸಂಖ್ಯೆ ಹೆಚ್ಚುತ್ತಿದೆ. ಕೆಲವರು ಹೆಣ್ಣುಮರಿಗಳನ್ನು ತಾವಾಗಿ ತಂದುಕೊಡಲಾರಂಭಿಸಿದರು. ಮನೆಯಂಗಳ ಇವುಗಳ ಬಿಡದಿಗೆ ಸಾಕಾಗದು ಎನಿಸಿದಾಗ ತನ್ನದೇ ಒಂದೆಕರೆ ಖಾಲಿ ಜಾಗವನ್ನು ಸಮತಟ್ಟು ಮಾಡಿಸಿ ಕಟ್ಟಡಗಳನ್ನು ಕಟ್ಟಿಸಿದರು. ನಾಯಿಗಳು ಹೊರಗೆ ಹೋಗದಂತೆ ಸುತ್ತಲೂ ಗೋಡೆ ನಿರ್ಮಿಸಿದರು.